## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/3485/2019/ಎಆರ್‌ಇ-9

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 7.8.2021.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ*

ವಿಷಯ: ಬಂಗಾರಪೇಟೆ ತಾಲ್ಲೂಕು, ರಾಬರ್ಟ್‌ಸನ್‌ಪೇಟೆ ಹೋಬಳಿ, ಬೈಂಗಾನಹಳ್ಳಿ ಗ್ರಾಮದ ಗೋಮಾಳ ಸರ್ವೆ ನಂ: 20 ಹೊಸ ಸರ್ವೆ ನಂ: 43, ವಿಸ್ತೀರ್ಣ 04 ಎಕರೆ 38 ಗುಂಟೆ ಜಮಿನಿಗೆ ಸಂಬಂಧಿಸಿದಂತೆ, ಕಡತವನ್ನು ಹುಡುಕಲು ಕ್ರಮ ಕೈಗೊಂಡು, ದುರಸ್ತಿ ಕ್ರಮ ಜರುಗಿಸುವ – ಬಗ್ಗೆ.

****

1. ದೂರುದಾರರಾದ ಶ್ರೀ.ಜಿ.ಕೃಷ್ಣಯ್ಯ ಬಿನ್ ಲೇಟ್ ಗಂಗಪ್ಪ ನಂ: 197, ಕಾರೋನೇಷನ್ ರಸ್ತೆ, ಗುಂಡುರಾವ್ ವೃತ್ತ, ಭಾರತ್ ಗ್ಯಾಸ್ ಪಕ್ಕ, ಬಂಗಾರಪೇಟ್ ಪಟ್ಟಣ, ಕೋಲಾರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ. ಜಗದೀಶ್.ಎನ್.ಹೆಚ್, ಪರ್ಯಾವೇಕ್ಷಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರು ಕಛೇರಿ, ಬಂಗಾರಪೇಟೆ ತಾಲ್ಲೂಕು, ಬಂಗಾರಪೇಟೆ-563114 ಮತ್ತು (2) ಶ್ರೀ.ರವಿಕುಮಾರ್, ಎಸ್.ಆರ್. ಹಕ್ಕುದಾಖಲೆ ಶಿರಸ್ತೇದಾರರ್, ತಹಶೀಲ್ದಾರ್ ರವರ ಕಾರ್ಯಾಲಯ ಬಂಗಾರಪೇಟೆ ತಾಲ್ಲೂಕು, ಬಂಗಾರಪೇಟೆ (ಇನ್ನು ಮುಂದೆ "ಎದುರುದಾರ ನಂ: 1 ಮತ್ತು 2" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಬಂಗಾರಪೇಟೆ ತಾಲ್ಲೂಕು ರಾಬರ್ಟ್‌ಸನ್ ಪೇಟೆ ಹೋಬಳಿ ಬೈರಗಾನಹಳ್ಳಿ ಗ್ರಾಮದ ಗೋಮಾಳ ಸರ್ವೆ ನಂ: 43 ವಿಸ್ತೀರ್ಣ 04 ಎಕರೆ 38 ಗುಂಟೆ ಜಮೀನು ದೂರುದಾರರಿಗೆ ದರಖಾಸ್ತು ಮೂಲಕ ಮಂಜೂರಾಗಿದ್ದು, ಸದರಿ ಜಮೀನಿನ ಹದ್ದುಬಸ್ತು ಗುರುತಿಸಿ, ಸರ್ವೆ ಮಾಡಲು ದಿನಾಂಕ: 11.01.2016 ರಲ್ಲಿ ಅರ್ಜಿ ಸಲ್ಲಿಸಿದ್ದರೂ, ಕಡತದಲ್ಲಿ ಟಿಪ್ಪಣಿ, ಆಕಾರಬಂದ್, ಪೋಡಿಗಳನ್ನು ಇಲ್ಲದಂತೆ ಮಾಡಿ, ತಮ್ಮ ಹೆಸರಿನಲ್ಲಿರುವ ಪಹಣಿಯನ್ನು ರದ್ದುಗೊಳಿಸುವುದಾಗಿ ನೋಟೀಸ್ ನೀಡಿ ತೊಂದರೆ ನೀಡುತ್ತಿದ್ದು, 1 ಮತ್ತು 2ನೇ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

Scanned with CamSca

3. ದೂರಿನ ಜೊತೆಗೆ ಬಂಗಾರಪೇಟೆ ತಹಶೀಲ್ದಾರರಿಗೆ ಸಹಾಯಕ ಆಯುಕ್ತರು, ಕೋಲಾರ ಉಪ ವಿಭಾಗ ರವರು ಬರೆದ ಪತ್ರ, ತಹಶೀಲ್ದಾರರು, ಕೋಲಾರ ಉಪ ವಿಭಾಗಾಧಿಕಾರಿಗಳಿಗೆ ಬರೆದ ಪತ್ರ, ನೋಟೀಸ್, ಹದ್ದುಬಸ್ತು, ಪಹಣಿ, ಮ್ಯುಟೇಷನ್, ಪಟ್ಟಾ ಪುಸ್ತಕದ ಪ್ರತಿ, ಹಕ್ಕು ಬದಲಾವಣೆ ವಹಿ ಹಾಗೂ ಇನ್ನಿತರೆ ದಾಖಲೆಗಳ ಪ್ರತಿಗಳನ್ನು ಸಲ್ಲಿಸಿದ್ದಾರೆ.

4. ದೂರನ್ನು ದಾಖಲಿಸಿಕೊಂಡ ನಂತರ, ಪ್ರಾಥಮಿಕ ಪರಿಶೀಲನಾ ಟಿಪ್ಪಣಿಯ ಆಧಾರದ ಮೇರೆಗೆ 1 ಮತ್ತು 2ನೇ ಎದುರುದಾರರಿಂದ ಆಕ್ಷೇಪಣೆಯನ್ನು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬಂಗಾರಪೇಟೆ ರವರಿಂದ ವರದಿಯನ್ನು ಕೋರಲಾಗಿದ್ದು, 1 ಮತ್ತು 2ನೇ ಎದುರುದಾರರು ಆಕ್ಷೇಪಣೆ ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬಂಗಾರಪೇಟೆ ರವರು ವರದಿಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ.

5. 1ನೇ ಎದುರುದಾರರು, ತಮ್ಮ ಆಕ್ಷೇಪಣೆಯಲ್ಲಿ, ತಾವು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಬಂಗಾರಪೇಟೆಯಲ್ಲಿ ಭೂ.ಸ.ನಿ. ರವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ, ಆನ್‌ಲೈನ್‌ನಲ್ಲಿ ಸ್ವೀಕೃತಿಯಾದ ಅರ್ಜಿಗಳಿಗೆ ಕಛೇರಿಯ ಮೂಲ ದಾಖಲೆ ಆಕಾರ್ ಬಂದ್ ಪರಿಶೀಲಿಸಿ ವಿಷಯ ನಿರ್ವಾಹಕರು ಪಾಸ್ ಮಾಡಿದ ಅರ್ಜಿಗಳನ್ನು ಆರಂಭಿಕ ಅನುಮೋದನೆ ಮಾಡುವುದು 1ನೇ ಎದುರುದಾರರ ಕೆಲಸವಾಗಿತ್ತು ಎಂದು ತಿಳಿಸಿರುತ್ತಾರೆ. ದೂರುದಾರರು ಮೋಜಣಿ ಆನ್‌ಲೈನ್ ತಂತ್ರಾಂಶದ ಮೂಲಕ ದಿ: 11.1.2016 ರಲ್ಲಿ ಸರ್ವೆ ನಂ: 43ರ ಹದ್ದು ಬಸ್ತಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಸರ್ವೆ ನಂ: 43ಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಇಲ್ಲದ್ದರಿಂದ ವಿಷಯ ನಿರ್ವಾಹಕರು ಸರ್ವೆ ನಂ: 43ರ ವಿಸ್ತೀರ್ಣ 0.00 ಎಂದು ನಮೂದಿಸಿ ಆರ್.ಆರ್.ಟಿ ಶಾಖೆಗೆ ಲಾಗ್‌ಇನ್ ಮೂಲಕ ವರ್ಗಾಯಿಸಿದ್ದನ್ನು ಪರಿಶೀಲಿಸಿ ಅನುಮೊದಿಸಿದ್ದೇನೆ ಎಂದು ತಿಳಿಸಿರುತ್ತಾರೆ. ಪ್ರಕರಣವು ಪ್ರಸ್ತುತ ಮೋಜಿಣಿ ತಂತ್ರಾಂಶದ ಆರ್.ಆರ್. ಶಿರಸ್ತೇದಾರರ ಲಾಗ್‌ಇನ್ ನಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದೆಂದು ತಿಳಿಸಿದ್ದಾರೆ. ಮುಂದುವರೆದು ಸ. ನಂ: 43ರ ಬಗ್ಗೆ ತಹಶೀಲ್ದಾರ್ ಬಂಗಾರಪೇಟೆ ರವರು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ದಿನಾಂಕ: 5.12.2018 ಮತ್ತು 8.3.2019 ರಂದು ಮಾಹಿತಿ ಕೋರಿ ಪತ್ರ ಬರೆದಿದ್ದು ಸದರಿ ಪತ್ರಕ್ಕೆ ಅವರ ಕಛೇರಿಯಿಂದ ದಿನಾಂಕ: 19.7.2019 ರಂದು ಉತ್ತರ ನೀಡಿದ್ದಾರೆಂದು ಅವರ ಕಛೇರಿಯಿಂದ ಸರ್ವೆ ದಾಖಲೆಗಳು 2012ನೇ ಸಾಲಿನಿಂದ ಹಿಂದೆಯೇ ಸ್ಕ್ಯಾನ್ ಆಗಿದ್ದು ಸ. ನಂ: 43ರ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ, ತಾನು 2015 ರಿಂದ ಕೆಲಸ ನಿರ್ವಹಿಸುತ್ತಿದ್ದು 2012 ಕ್ಕಿಂತ ಹಿಂದೆಯೇ ದಾಖಲೆಗಳು

Scanned with CamScanner

ಇಲ್ಲದೆ ಇರುವುದರಿಂದ ತಮ್ಮನ್ನು ಪ್ರಕರಣದಿಂದ ಕೈಬಿಡಲು ಕೋರಿದ್ದಾರೆ. ತಮ್ಮ ಆಕ್ಷೇಪಣೆಯ ಜೊತೆಗೆ ದಿ: 19.3.2019ರ ಪತ್ರದ ಪ್ರತಿ ಮತ್ತು ಸ್ಕ್ಯಾನ್ ಡಾಟಾ ಬೇಸ್ ಆನ್ ಲೈನ್‌ನ ಪ್ರತಿಯನ್ನು ಲಗತ್ತಿಸಿದ್ದಾರೆ.

6. 2ನೇ ಎದುರುದಾರರು, ತಮ್ಮ ಆಕ್ಷೇಪಣೆಯಲ್ಲಿ, ಬಂಗಾರಪೇಟೆ ತಾಲ್ಲೂಕು, ಕಸಬಾ (ರಾಬರ್ಟ್‌ಸನ್ ಪೇಟೆ ಹೋಬಳಿ), ಬೈರಗಾನಹಳ್ಳಿ ಗ್ರಾಮದ ಸ. ನಂ: 20ರ ಪೈಕಿ 4–38 ಎಕರೆ ಜಮೀನು ಜಿ.ಕೃಷ್ಣಯ್ಯ ಬಿನ್ ಗಂಗಪ್ಪ ರವರಿಗೆ ಎಲ್.ಎನ್.ಡಿ/ಆರ್.ಯು.ಓ/329/91–92 ದಿ: 31.3.1999 ರಂದು ದರಖಾಸ್ತು ಮೂಲಕ ಮಂಜೂರಾಗಿ ಎಂ.ಆರ್.ನಂ:7/98–99 ರಂತೆ ಹಕ್ಕು ಬದಲಾವಣೆಯಾಗಿರುತ್ತದೆ. 2008–09 ನೇ ಸಾಲಿನವರೆವಿಗೂ ಸ. ನಂ: 20ರಲ್ಲಿ ಮಂಜೂರಿದಾರರ ಹೆಸರಿಗೆ ಖಾತೆ ಮುಂದುವರೆದಿರುತ್ತದೆ. ನಂತರ ಎಂ.ಆರ್. ನಂ: 1/2008–09ರ ಮ್ಯುಟೇಷನ್ ಆದೇಶನುಸಾರ ಸ. ನಂ; 20ರಲ್ಲಿ ಮಂಜೂರಿದಾರರಾದ ಶ್ರೀ. ಜಿ.ಕೃಷ್ಣಯ್ಯ ಬಿನ್ ಗಂಗಪ್ಪ ರವರ ಹೆಸರಿಗೆ ದುರಸ್ತಿಯಾಗಿ ಹೊಸ ಸ. ನಂ: 43 ಆಗಿರುವುದಾಗಿ ಗಣಕೀಕರಣ ಪಹಣಿ ಇಂಡೀಕರಣ ಮಾಡಲಾಗಿರುತ್ತದೆ ಎಂದು, ತತ್ಸಂಬಂಧ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬಂಗಾರಪೇಟೆ ತಾಲ್ಲೂಕು, ರವರು ದಿ: 13.12.2018 ರಂದು ಬೈರಗಾನಹಳ್ಳಿ ಗ್ರಾಮದ ಸ. ನಂ: 20ರ ಪೈಕಿ ದುರಸ್ತಿಯಾಗಿ ಹೊಸ ಸ. ನಂ: 43 ರಚನೆಯಾಗಿರುವ ವಿಚಾರದಲ್ಲಿ ಮೋಜಣಿ ದಾಖಲೆಯನ್ನು ಪರಿಶೀಲಿಸಿ, ಬೈರಗಾನಹಳ್ಳಿ ಗ್ರಾಮದಲ್ಲಿ ಸ. ನಂ: 42 ಆಖೈರು ಇರುವುದರಿಂದ ಹಾಗೂ ಸ. ನಂ: 43 ಎಂದು ಯಾವ ದಾಖಲೆಯೂ ಇಲ್ಲದಿರುವುದರಿಂದ ದುರಸ್ತಿ ನೈಜತೆ ಪರಿಶೀಲಿಸಲು ರಹಾ ಇರುವುದಿಲ್ಲವೆಂದು ವರದಿ ಸಲ್ಲಿಸಿದ್ದು, ಆದರಂತೆ ಮಾನ್ಯ ಉಪ ವಿಭಾಗಾಧಿಕಾರಿಗಳ ಕಛೇರಿಗೆ ಸ. ನಂ: 43ರ ಗಣಕೀಕರಣ ಪಹಣಿ ಇಂಡೀಕರಣವಾಗಿರುವುದನ್ನು ರದ್ದು ಪಡಿಸಲು ಪ್ರಸ್ತಾವನೆಯನ್ನು ನಿವೇದಿಸಿಕೊಳ್ಳಲಾಗಿರುತ್ತದೆ, ಸದರಿ ಪ್ರಸ್ತಾವನೆಗೆ ಪ್ರತಿ ಉತ್ತರವಾಗಿ ಮಾನ್ಯ ಸಹಾಯಕ ಕಮಿಷನರ್ ರವರ ಕಛೇರಿಯಿಂದ ಪತ್ರ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

7. ಮುಂದುವರಿದು ಈ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದೂರಿರುವ ವಿಷಯವು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಬಂಗಾರಪೇಟೆ ರವರ ವ್ಯಾಪ್ತಿಗೆ ಸಂಬಂಧಿಸಿರುತ್ತದೆಯೇ ಹೊರತು, ತಾವು ವಿನಕಾರಣ ತೊಂದರೆ ನೀಡುತ್ತಿರುವ ಮಾತು ಸತ್ಯಕ್ಕೆ ದೂರವಾಗಿರುತ್ತದೆಯೆಂದು, ದಾಖಲೆಗಳ ಅನುಸಾರ ಕ್ರಮವಹಿಸಲಾಗಿರುತ್ತದೆಯೇ ಹೊರತು ಉದ್ದೇಶಪೂರ್ವಕವಾಗಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

Scanned with CamSca

8. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬಂಗಾರಪೇಟೆ ರವರ ವರದಿಯಲ್ಲಿ ಶ್ರೀ. ಜಿ.ಕೃಷ್ಣಯ್ಯ ಬಿನ್ ಲೇಟ್ ಗಂಗಪ್ಪ ರವರು ಬಂಗಾರಪೇಟೆ ತಾಲ್ಲೂಕು, ರಾಬರ್ಟ್‌ಸನ್‌ಪೇಟೆ ಹೋಬಳಿ, ಬೈರಗಾನಹಳ್ಳಿ ಗ್ರಾಮದ ಸ. ನಂ: 43ರ ಬಾಬ್ತು ಮೋಜಣಿಯಲ್ಲಿ ಹದ್ದುಬಸ್ತು ಅಳತೆಗೆ ದಿ: 11.1.2016 ರಂದು ಸಂಖ್ಯೆ: 19120415507745ರಂತೆ ಅರ್ಜಿ ಸಲ್ಲಿಸಿರುತ್ತಾರೆ. ಹಾಲಿ ಪ್ರಕರಣವು ಆರ್. ಆರ್. ಶಿರಸ್ತೇದಾರರ ಲಾಗಿನ್‌ನಲ್ಲಿ ಬಾಕಿ ಇರುತ್ತದೆ, ಈ ಬಗ್ಗೆ ಕಛೇರಿಯ ಸರ್ವೆ ದಾಖಲೆಗಳನ್ನು ಪರಿಶೀಲಿಸಲಾಗಿ ಗ್ರಾಮದ ಅಖೈರು ನಂಬರು 42 ಇದ್ದು, ಸ. ನಂ: 43 ಪೋಡಿಯಾಗಿರುವುದಿಲ್ಲಾ. ಅರ್ಜಿದಾರರು ದೂರು ಅರ್ಜಿಯ ಜೊತೆ ಲಗತ್ತಿಸಿರುವ ಸ. ನಂ: 43ರದ್ದು ಎಂದು ಹೇಳಲಾದ ಟಿಪ್ಪಣಿ ಜೆರಾಕ್ಸ್ ನಲ್ಲಿ ಅಳತೆ ದಿ: 26.10.99 ಎಂದು ನಮೂದಿಸಿದ್ದು, ಸುಮಾರು 9 ವರ್ಷದ ನಂತರ ಎಂ.ಆರ್/01/08–09 ರಂತೆ ಹೊಸ ನಂಬರ್ ಆರ್.ಟಿ.ಸಿ ಇಂಡೀಕರಣವಾಗಿರುವುದು ಕಂಡುಬಂದಿರುತ್ತದೆ.

9. ದಿ: 8.3.19 ರಂದು ತಹಶೀಲ್ದಾರ್ ಬಂಗಾರಪೇಟೆ ರವರು ನಂ/ತ/ಬಂ/ಆರ್.ಆರ್.ಟಿ/ಸಿಆರ್/765/2018 ರಂತೆ ಸ. ನಂ: 43ರ ಬಗ್ಗೆ ಮಾಹಿತಿ ಕೋರಿದಂತೆ, ಅವರ ಕಛೇರಿಯಿಂದ ಸಂ: ಭೂಸನಿ/ಇತರೆ/554/2018–19 ದಿನಾಂಕ: 19.3.2019 ರಲ್ಲಿ ಸ. ನಂ: 43 ದುರಸ್ತಿ ಆಗಿರುವ ಬಗ್ಗೆ ಯಾವುದೇ ದಾಖಲೆ ಇಲ್ಲವೆಂದು ವರದಿ ನೀಡಿರುತ್ತಾರೆ.

10. 2012 ನೇ ಸಾಲಿನಿಂದ ಈ ಹಿಂದೆ ಸ್ಕ್ಯಾನಿಂಗ್ ಮಾಡಲಾದ ದಾಖಲಾತಿಗಳಲ್ಲಿಯೂ ಸ. ನಂ: 43 ಎಂದು ದುರಸ್ತಿಯಾದ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲಾ. ಈ ಬಗ್ಗೆ ಸರ್ಕಾರದ ವೆಬ್‌ಸೈಟ್ http://landrecords. Karnataka.gov.in/service42 ನಲ್ಲೂ ಸ. ನಂ: 43 ಸ್ಕ್ಯಾನ್ ಆಗಿರುವುದಿಲ್ಲಾ ಎಂದು, ಆದ್ದರಿಂದ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಲು ವರದಿಯಲ್ಲಿ ಕೋರಿರುತ್ತಾರೆ.

11. ಕಡತದಲ್ಲಿರುವ ದೂರು, ಆಕ್ಷೇಪಣೆಗಳು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬಂಗಾರಪೇಟೆ ರವರ ವರದಿಯನ್ನು ದೂರುದಾರರು ಮತ್ತು ಎದುರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ ದೂರುದಾರರು ಸ. ನಂ; 43 ರಕ್ಕೆ 04 ಎಕರೆ 38 ಗುಂಟೆಗೆ ಹದ್ದುಬಸ್ತು ಕೋರಿ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ತಕರಾರು ಇಲ್ಲ. ಎದುರುದಾರ–1 ರವರ ಪ್ರಕಾರ, ಸದರಿ ಅರ್ಜಿ ಇನ್ನು ವಿಲೆ ಇದೆ ಎದುರುದಾರರ ಪ್ರಕಾರ ಸ. ನಂ: 43ರ ಸರ್ವೆ ದಾಖಲೆಗಳು ಲಭ್ಯವಿರುವುದಿಲ್ಲ.

Scanned with CamSca

12. ದೂರುದಾರರ ಪ್ರತ್ಯುತ್ತರದಲ್ಲಿ ಸ. ನಂ:20ರ ಪೈಕಿ 4 ಎ., 38 ಗು., ಜಮೀನು ದರಖಾಸ್ತಿನ ಮೂಲಕ ತಹಶೀಲ್ದಾರ್ ರವರ ಆದೇಶ ಸಂ: ಎಲ್.ಎನ್.ಡಿ./ಆರ್.ಯು.ಓ/329/91–92 ರಂತೆ ಮಂಜೂರಾಗಿ ದಿ: 31.3.1990ರಲ್ಲಿ ಸಾಗುವಳಿ ಚೀಟಿ ನೀಡಿದ್ದು ಸಾಗುವಳಿ ಚೀಟಿ ಪ್ರಕಾರ ಮ್ಯುಟೇಷನ್ ಎಂ.ಆರ್. ನಂ: 7/98–99 ರಂತೆ ಅವರ ಹೆಸರಿಗೆ ಖಾತೆಯಾಗಿ ಪಹಣಿಯಲ್ಲಿ ಅವರ ಹೆಸರು ದಾಖಲಾಗಿರುತ್ತದೆ. ನಂತರ ಮಂಜೂರಿಯಂತೆ ಆಕಾರ್ ಬಂದ್ ದುರಸ್ತಿಗಾಗಿ ತಹಶೀಲ್ದಾರ್ ಕಛೇರಿಯ ಪತ್ರದ ಸಂ: ತಾಪಿಡಿ ಆರ್ (ರಾ)3/99–2000 ದಿ: 6.4.1999ರಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಕೋಲಾರ ಉಪ ವಿಭಾಗ, ಕೋಲಾರ ರವರಿಗೆ ಮೂಲ ಮಂಜೂರಾತಿ ಕಡತವನ್ನು ರವಾನಿಸಲಾಗಿ ಅದರಂತೆ ತಾಭೂಪ ಎಲ್.ಆರ್.(ಎನ್)/4/99–2000 ದಂತೆ ಅವರ ಕಛೇರಿಯ ಕಡತದ ಸಂಖ್ಯೆನ್ನು ನೀಡಲಾಗಿರುತ್ತದೆ. ದುರಸ್ತಿಯಂತೆ ಎ.ಡಿ.ಎಲ್‌ರವರ ನಂ: 4/99–2000ರಂತೆ ಪೋಡಿ ಮಾಡಿದ್ದು ಅದರಂತೆ ತಹಶೀಲ್ದಾರ್ ರವರ ಆದೇಶ ಸಂ: ಆರ್.ಅರ್.ಟಿ–ಪಿಟಿ/270/08–09 ದಿ: 4.4.2009 ಅನ್ನು ಉಲ್ಲೇಖಿಸಿ ಎಂಆರ್. 01/2008–09ರಂತೆ ಮೂಲ ಸ. ನಂ: 20/ಪಿ4 ರಿಂದ ದುರಸ್ತಿ ಹೊಸ ಸ. ನಂ: 43 ಆಗಿರುವುದಾಗಿ ಮ್ಯುಟೇಷನ್ ಅಂಗೀಕರಿಸಿ ಗಣಕೀಕೃತ ಪಹಣಿಯಲ್ಲಿ ಇಂಡೀಕರಿಸಲಾಗಿರುತ್ತದೆ. ತದನಂತರ ತನ್ನ ಜಮೀನಿನ ಸ್ವಾದೀನತೆ ಬಗ್ಗೆ ಉಂಟಾದ ವಿವಾದದ ಬಗ್ಗೆ ತಾನು ಆರಕ್ಷಕ ಅಧೀಕ್ಷಕರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದಾಗ ಅವರುಗಳು ನೀಡಿದ ಸೂಚನೆಯನ್ನು ಉಲ್ಲೇಖಿಸಿ ಆರಕ್ಷಕ ಅಧೀಕ್ಷಕರು ಹಾಗೂ ತಾಲ್ಲೂಕು ತಹಶೀಲ್ದಾರ್ ರವರು ಭೂ ಮಾಪನ ಅಧಿಕಾರಿಗಳಿಗೆ ಪತ್ರ ಬರೆದು ಹದ್ದು ಬಸ್ತು ಗುರುತಿಸಲು ತಿಳಿಸಿರುತ್ತಾರೆ. ಸದರಿ ಸ. ನಂ: 43ರ ಹದ್ದು ಬಸ್ತು ಅಳತೆ ಮಾಡುವಾಗ ತಾಲ್ಲೂಕು ತಹಶೀಲ್ದಾರವರು ಮತ್ತು ಆರಕ್ಷಕ ಅಧೀಕ್ಷಕರು ಸ್ಥಳಕ್ಕೆ ಬಂದಿದ್ದು ಆ ಸಮಯದಲ್ಲಿ ತಾಲ್ಲೂಕು ಭೂ ಮಾಪಕರಾದ ಶಿವಕುಮಾರ್ ರವರು ಸದರಿ ಸ. ನಂ: 43ಕ್ಕೆ ಸಂಬಂಧಿಸಿದ ಟಿಪ್ಪಣಿ ಆಕಾರ್ ಬಂದ್ ಪೋಡಿ ಪ್ರತಿಗಳನ್ನು ಸ್ಥಳಕ್ಕೆ ತೆಗೆದುಕೊಂಡು ಬಂದಿದ್ದ ಅಧಿಕಾರಿಗಳ ಸಮ್ಮುಖದಲ್ಲಿ ಅಳತೆ ಕಾರ್ಯ ಪೂರೈಸಿ ಹದ್ದು ಬಸ್ತು ಕಲ್ಲುಗಳನ್ನು ಎ, ಬಿ.ಸಿ. ಡಿ ಇ.ಎಫ್, ಜಿ.ಹೆಚ್. ಐ ಎಂದು ಗುರುತಿಸಿ ವರದಿಯನ್ನು ನೀಡಿರುತ್ತಾರೆ. ಇಷ್ಟೆಲ್ಲ ನಡೆದು ಸುಮಾರು 10–11 ವರ್ಷಗಳು ಕಳೆದಿದ್ದು ಪುನಃ ತಾನು ಹದ್ದು ಬಸ್ತು ಸರ್ವೆಗೆ ದಿ: 11.1.2016 ರಲ್ಲಿ ಅರ್ಜಿ ಸಲ್ಲಿಸಿದಾಗ ಅಳತೆ ಮಾಡದೆ ಸತಾಯಿಸಿ ಕೊನೆಗೆ ಕಡತದಲ್ಲಿ ದಾಖಲೆಗಳು ಇಲ್ಲ ಜಮೀನು ದುರಸ್ತಿಯಾಗಿಲ್ಲ ಪಹಣಿಯನ್ನು ವಜಾಗೊಳಿಸಲು ತಹಶೀಲ್ದಾರ್ ರವರಿಗೆ ಪತ್ರ ಬರೆದಿದ್ದೇನೆಂದು ಹೇಳಿರುತ್ತಾರೆ. ಇವರ ಶೀಪಾರಸ್ಸಿನಂತೆ ಶಿರಸ್ಥೆದಾರರಾದ ರವಿ ಕುಮಾರ್ ರವರು ಸರಿಯಾಗಿ ತನಿಖೆ ಮಾಡದೆ ಪಹಣಿಯನ್ನು ವಜಾ ಮಾಡುತ್ತೇವೆಂದು ನೋಟೀಸು ಕೊಟ್ಟಿದ್ದಾರೆ. ತನ್ನ ಜಮೀನಿನ ಸ. ನಂ: 43ರ

Scanned with CamSca

ಟಿಪ್ಪಣಿ ಆಕಾರ್ ಬಂದ್ ಪೋಡಿ ಪತ್ರಿಕೆಗಳು ಕಡತದಿಂದ ಹೇಗೆ ಮಾಯವಾಗಿದೆ ಎಂಬುದರ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿದ್ದಾರೆ.

13. ಇವರು ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಬೈರಗಾರನಹಳ್ಳಿ ಗ್ರಾಮದ ಸ. ನಂ: 20 ಪೈಕಿ 4.38 ಎ., ಜಮೀನು ದೂರುದಾರರಿಗೆ ತಹಶೀಲ್ದಾರ್ ರವರ ಆದೇಶದ ಸಂ: ಎಲ್.ಎನ್.ಡಿ/ಆರ್.ಯುಓ 329/91-92 ರಂತೆ ದಿ: 31.3.1999 ರಲ್ಲಿ ಸಾಗುವಳಿ ಚೀಟಿ ನೀಡಿದ್ದು ಎಂ.ಆರ್. 07 98-99 ರಂತೆ ಖಾತೆ ಬದಲಾವಣೆಯಾಗಿ ಪಹಣಿಯಲ್ಲಿ ದೂರುದಾರರ ಹೆಸರು ದಾಖಲಾಗಿರುತ್ತದೆ. ನಂತರ ಮಂಜೂರಿಯಂತೆ ಆಕಾರ್ ಬಂದ್ ದುರಸ್ತಿಗಾಗಿ ತಹಶೀಲ್ದಾರ್ ಕಛೇರಿಯ ಪತ್ರದ ಸಂ: ಕಪಿಡಿ ಆರ್ (ರ)-3/99-2000 ದಿ: 6.4.1999 ರಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಕೋಲಾರ ಉಪ ವಿಭಾಗ, ಕೋಲಾರ ರವರಿಗೆ ಮೂಲ ಮಂಜೂರಾತಿ ಕಡತವನ್ನು ರವಾನಿಸಲಾಗಿ ಅದರಂತೆ ತಾಭೂಪ ಎಲ್.ಆರ್.(ಎನ್)/4/99-2000 ದಂತೆ ಅವರ ಕಛೇರಿಯ ಕಡತದ ಸಂಖ್ಯೆನ್ನು ನೀಡಲಾಗಿರುತ್ತದೆ. ದುರಸ್ತಿಯಂತೆ ಎ.ಡಿ.ಎಲ್‌ರವರ ನಂ: 4/99-2000ರಂತೆ ಪೋಡಿ ಮಾಡಿದ್ದು ಅದರಂತೆ ತಹಶೀಲ್ದಾರ್ ರವರ ಆದೇಶ ಸಂ: ಆರ್.ಅರ್.ಟಿ-ಪಿಟಿ/270/08-09 ದಿ: 4.4.2009 ಅನ್ನು ಉಲ್ಲೇಖಿಸಿ ಎಂಆರ್. 01/2008-09ರಂತೆ ಮೂಲ ಸ. ನಂ: 20/ಪಿ 4 ರಿಂದ ಹೊಸ ಸ. ನಂ: 43 ಆಗಿರುವುದಾಗಿ ಮ್ಯುಟೇಷನ್ ಅಂಗೀಕರಿಸಿ ಗಣಕೀರಣ ಪಹಣಿಯಲ್ಲಿ ಇಂಡೀಕರಿಸಲಾಗಿರುತ್ತದೆ. ಈ ಪಹಣಿಯಂತೆ ಮಂಜೂರಿದಾರರು ಕೆನರಾ ಬ್ಯಾಂಕಿಗೆ ಆಧಾರ ಮಾಡಿರುವುದು ಎಂ.ಆರ್.ಟಿ 8/2014-15 ರಂತೆ ಪಹಣಿಯಲ್ಲಿ ದಾಖಲಾಗಿರುತ್ತದೆ. ಈ ಜಮೀನಿನ ಸ್ವಾಧೀನಕ್ಕೆ ಕುರಿತು ಉಂಟಾದ ವಿವಾಧದ ಬಗ್ಗೆ ಜಿಲ್ಲಾ ಪೋಲೀಸರ ಸೂಚನೆಯನ್ನು ಉಲ್ಲೇಖಿಸಿ ಸ. ನಂ: 43ರ ಹದ್ದು ಬಸ್ತು ಕಲ್ಲುಗಳನ್ನು ಎ ರಿಂದ ಐ ಎಂಬುದಾಗಿ ಗುರುತಿಸಿದೆ. ಇದರೊಂದಿಗೆ, ಸರ್ವೆ ನಂ: 43ರ ಗಣಕೀಕರ ಪಹಣಿ ಇಂಡೀಕರಣವಾಗಿರುವುದನ್ನು ರದ್ದುಪಡಿಸಲು ಅನುಮತಿ ಕೋರಿ ತಹಶೀಲ್ದಾರರು ಮಾನ್ಯ ಉಪವಿಭಾಗಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಉಪವಿಭಾಗಧಿಕಾರಿಗಳು ದಿ: 14.2.19 ರ ತಮ್ಮ ಪತ್ರದಲ್ಲಿ ಈ ಎಲ್ಲಾ ಅಂಶಗಳನ್ನು ಉಲ್ಲೇಖಿಸಿ ಈ ಕೆಳಕಂಡಂತೆ ನಿರ್ದೇಶವನ್ನು ತಹಶೀಲ್ದಾರ್ ರವರಿಗೆ ನೀಡಿದ್ದಾರೆ.

14. "ಈ ಎಲ್ಲಾ ಪ್ರಕ್ರಿಯೆಗಳು ನಡೆದು 10 ವರ್ಷಗಳ ಅವಧಿ ಕಳೆದ ನಂತರ ಈ ಜಮೀನಿನ ಹೊಸ ಸ. ನಂ: 43 ಆಗಿರುವುದಿಲ್ಲವೆಂದು ಈ ಗ್ರಾಮದ ಅಂತಿಮ ಸ. ನಂ: 42 ಆಗಿರುತ್ತದೆಂದು ಎಡಿಎಲ್ಆರ್ ರವರು ದಿ: 13.12.2018 ರಲ್ಲಿ ತಹಶೀಲ್ದಾರರಿಗೆ ಪತ್ರ ಬರೆದಿರುವುದು

Scanned with CamSca

ಸಂಶಯಾಸ್ಪದವಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಭೂ ಮಾಪನ ಇಲಾಖೆಯವರು ಕೈಗೊಂಡಿರುವ ದುರಸ್ತಿ ಪ್ರಕ್ರಿಯೆಗಳು ಮತ್ತು ಅವರು ನೀಡಲಾಗಿರುವ ಸರ್ವೆ ದಾಖಲೆಗಳನ್ನು ತಹಶೀಲ್ದಾರ್ ರವರು ಸರಿಯಾಗಿ ಪರಿಶೀಲಿಸದೇ ಮಂಜೂರಿಯಂತೆ ಹಕ್ಕು ಬದಲಾವಣೆ ಆಗಿ ದುರಸ್ಥಿಯಂತೆ ಹೊಸ ಸ. ನಂ: 43ನ್ನು ದಾಖಲೆಗಳಲ್ಲಿ ಇಂಡೀಕರಿಸಿ ಮುಟೇಷನ್ ಆಂಗೀಕಾರ ಆಗಿರುವುದನ್ನು 10 ವರ್ಷಗಳ ನಂತರ ಯಾವ ನಿಯಮಗಳ ಅಡಿಯಲ್ಲಿ ರದ್ದುಪಡಿಸಬೇಕು ಎಂಬುದನ್ನು ಪರಿಶೀಲಿಸದೇ ರದ್ದುಮಾಡಲು ಶಿಫಾರಸ್ಸು ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ. ಈ ಸರ್ವೆ ನಂಬರ್ ದುರಸ್ಥಿಯಾಗಿ ಹೊಸ ಸ. ನಂ: 43 ಆಗಿರದಿದ್ದಲ್ಲಿ ಇದನ್ನು ಮುಟೇಷನ್ ಅಂಗೀಕರಿಸುವ ಸಮಯದಲ್ಲಿ ಏಕೆ ಪರಿಶೀಲಿಸಿರುವುದಿಲ್ಲ? ಪಹಣಿಯಲ್ಲಿ ಏಕೆ ಇಂಡೀಕರಿಸಲಾಯಿತು? ಎಂಬುದರ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಮಂಜೂರಿದಾರರು ಅವರಿಗಾಗಿರುವ ತೊಂದರೆಯ ಬಗ್ಗೆ ಮಾನ್ಯ ಲೋಕಾಯುಕ್ತರಿಗೆ ದೂರು ಸಲ್ಲಿಸಿದಕ್ಕೆ ಇದನ್ನು ರದ್ದುಪಡಿಸಲು ವರದಿ ಮಾಡಿರುವಂತೆ ಕಂಡು ಬಂದಿರುತ್ತದೆ. ಎ.ಡಿಎಲ್ಆರ್ ರವರ ವರದಿಯಂತೆ ಈ ಗ್ರಾಮದ ಆಖೈರಿಸ. ನಂ: 42 ಆಗಿದ್ದಲ್ಲಿ ಹೊಸ ಸ. ನಂ: 43 ಎಂಬುದಾಗಿ ದಾಖಲೆಗಳನ್ನು ಏಕೆ ನೀಡಲಾಯಿತು? ಮಂಜೂರಿಯಂತೆ ದುರಸ್ಥಿ ಕ್ರಮ ಕೈಗೊಳ್ಳಲು ಮೂಲ ಮಂಜೂರಾತಿ ಕಡತವನ್ನು ಎ.ಡಿಎಲ್ಆರ್ ರವರಿಗೆ ರವಾನಿಸಿರುವುದರಿಂದ ದುರಸ್ಥಿ ಕ್ರಮ ಕೈಗೊಳ್ಳುವುದು ಇಲಾಖೆಯ ಜವಾಬ್ದಾರಿ ದುರಸ್ಥಿಯಂತೆ ದಾಖಲೆಗಳನ್ನು ನೀಡಿ ಅದು ಕಂದಾಯ ದಾಖಲೆಗಳಲ್ಲಿ ಇಂಡೀಕರಣವಾದ ನಂತರ ಹೊಸ ಸ. ನಂ: 43 ಆಗಿರುವುದಿಲ್ಲವೆಂದು ತಿಳಿಸಿರುವುದು ಅನುಮಾನಕ್ಕೆ ಎಡೆಯಾಗಿರುತ್ತದೆ. "ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ತಹಶೀಲ್ದಾರರು ಕ್ರಮಬದ್ಧವಾಗಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಮತ್ತು ಇನ್ನು ಮುಂದೆ ಈ ರೀತಿಯ ಅಸಂಬದ್ಧ ವರದಿಯನ್ನು ಸಲ್ಲಿಸದಿರಲು ಹಾಗೂ ವಾಸ್ತವಾಂಶಗಳನ್ನು ಮಾನ್ಯ ಲೋಕಾಯುಕ್ತರಿಗೆ ದಿನಾಂಕ: 2.3.2019 ಕ್ಕೆ ಮುಂಚಿತವಾಗಿ ಸಲ್ಲಿಸಲು ಸೂಚಿಸಿ ವಿಶಿಷ್ಟ ಕಡತವನ್ನು ಇದರೊಂದಿಗೆ ಲಗತ್ತಿಸಿ ಹಿಂತಿರುಗಿಸಿದೆ."

15. ಇದರಿಂದ ದೂರುದಾರರಿಗೆ ಸ. ನಂ: 20 ಮಂಜೂರಾಗಿದ್ದು, ನಂತರ ಮೋಜಣಿ ಮಾಡಿದ್ದು, ಹೊಸ ಸ. ನಂ: 43ರಂತೆ ನೀಡಲಾಗಿದ್ದು, ಸಂಬಂಧಪಟ್ಟ ದಾಖಲೆಗಳು ಪ್ರಸ್ತುತ ಕಡತದಲ್ಲಿ ಇಲ್ಲದೆ, ಸ್ಕ್ಯಾನ್ ಸಹ ಆಗದೆ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. ದೂರುದಾರರು ಹಾಜರು ಪಡಿಸಿರುವ ಸರ್ವೆ ದಾಖಲೆಗಳನ್ನು ಪರಿಶೀಲಿಸಲಾಗಿ, ಅವುಗಳನ್ನು ಸರ್ವೆ ಇಲಾಖೆಯಿಂದಲೇ ಈ ಹಿಂದೆ ನೀಡಿದ್ದು, ಮಂಜೂರಿಯಂತೆ ಉಪ ವಿಭಾಗಾಧಿಕಾರಿಗಳು ಗ್ರಹಿಸಿದಂತೆ,

Scanned with CamSca

ದುರಸ್ತಿ ಕ್ರಮ ಕೈಗೊಳ್ಳಲು ಮೂಲ ಮಂಜೂರಾತಿ ಕಡತವನ್ನು ಸಹಾಯಕ ನಿರ್ದೇಶಕರು, ಭೂದಾಖಲೆಗಳು ರವರಿಗೆ ರವಾನಿಸಿರುವುದರಿಂದ ದುರಸ್ತಿ ಕ್ರಮ ಕೈಗೊಳ್ಳುವುದು ಇಲಾಖೆಯ ಜವಾಬ್ದಾರಿಯಾಗಿದ್ದು, ದುರಸ್ತಿಯಂತೆ ದಾಖಲೆಗಳನ್ನು ನೀಡಿ ಅದು ಕಂದಾಯ ದಾಖಲೆಗಳಲ್ಲಿ ಇಂಡೀಕರಣವಾದ ನಂತರ ಹೊಸ ಸ. ನಂ: 43 ಆಗಿರುವುದಿಲ್ಲವೆಂದು ಹೇಳುವುದು ಸೂಕ್ತವಾಗಿರುವುದಿಲ್ಲ. ಎದುರುದಾರರು ನಂ; 1 ಮತ್ತು 2ರವರು ದಾಖಲೆಗಳು ಕಾಣೆಯಾಗಿವೆ ಎಂದು ಆಕ್ಷೇಪಣೆಯಲ್ಲಿ ತಿಳಿಸಿದ್ದು, ದಾಖಲೆಗಳನ್ನು ಹುಡುಕಲು ಕ್ರಮ ಕೈಗೊಂಡು, ದುರಸ್ತಿ ಕ್ರಮ ಜರುಗಿಸಿ ವರದಿ ಸಲ್ಲಿಸುವುದು ಸೂಕ್ತ.

17. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಬಂಗಾರಪೇಟೆ ತಾಲ್ಲೂಕು, ರಾಬರ್ಟ್‌ಸನ್‌ಪೇಟೆ ಹೋಬಳಿ, ಬೈಂಗಾನಹಳ್ಳಿ ಗ್ರಾಮದ ಗೋಮಾಳ ಸರ್ವೆ ನಂ: 20 ಹೊಸ ಸರ್ವೆ ನಂ: 43, ವಿಸ್ತೀರ್ಣ 04 ಎಕರೆ 38 ಗುಂಟೆ ಜಮಿನಿಗೆ ಸಂಬಂಧಿಸಿದಂತೆ, ಕಡತವನ್ನು ಹುಡುಕಲು ಕ್ರಮ ಕೈಗೊಂಡು, ಒಂದು ವೇಳೆ ಕಡತ ಪತ್ತೆಯಾಗದ ಪಕ್ಷದಲ್ಲಿ ಸದರಿ ಕಡತವನ್ನು ಮರು ಸೃಷ್ಟಿಸಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಮತ್ತು ದುರಸ್ತಿ ಕ್ರಮ ಜರುಗಿಸಿ, ಅನುಪಾಲನಾ ವರದಿಯನ್ನು ಸಲ್ಲಿಸಲು, ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

09/8/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ.

Scanned with CamScanner